ಮಾಡುತ್ತೇವೆಂದು ಹೇಳಿದ್ದಾರೆ. ಆ ಕಹಿ ಘಟನೆಗೆ ಅವಕಾಶ ಕೊಡದ ಹಾಗೆ ಏಪ್ರಿಲ್ ಒಂದರಿಂದ ಕೇಂದ್ರ ಕಛೇರಿಯನ್ನು ಅಲ್ಲೇ ಪ್ರಾರಂಭ ಮಾಡಬೇಕು. ಅಲ್ಲಿಯವರೆಗೆ ಅಧಿಕಾರಿಗಳು ವಾರದಲ್ಲಿ ಎರಡು ದಿನವಾದರೂ ಅಲ್ಲಿಗೆ ಹೋಗಿ ಕೆಲಸ ಮಾಡಿ ಬರಬೇಕು, ಬೆಂಗಳೂರಿನಲ್ಲೇ ಇದ್ದುಕೊಂಡು ಕೆಲಸ ಮಾಡಬೇಕೆಂದು ಏನು ಇದೆ? ವೀವರ್ಸ್ ಎಲ್ಲಾ ಹೆಚ್ಚಾಗಿರುವುದು ಆ ಕಡೆ, ಆದ್ದರಿಂದ ಅವರು ಅಲ್ಲಿ ಹೋಗಿ ಕೆಲಸ ಮಾಡಬೇಕು.

ಶ್ರೀ ಎಂ.ಎಸ್. ಪಾಟೀಲ್:- ಈ ಕಛೇರಿ ಹುಬ್ಬಳ್ಳಿಯಲ್ಲಿರತಕ್ಕ ಅವಶ್ಯಕತೆಯನ್ನು ಮನಗಂಡು ಅದನ್ನು ಸ್ಥಳಾಂತರಿಸತಕ್ಕ ವ್ಯವಸ್ಥೆ ಮಾಡಿದ್ದೇವೆ. ಸರ್ಕಾರಿ ಆದೇಶದಲ್ಲಿ 31-5-97ಕ್ಕೆ ಆ ಕೆಲಸವನ್ನು ಪೂರ್ಣಗೊಳಿಸತಕ್ಕ ತೀರ್ಮಾನ ತೆಗೆದುಕೊಂಡಿದ್ದೇವೆ. ಅದು ಒಂದು ತಿಂಗಳು ಮೊದಲೇ ಆಗಬೇಕೆಂದು ಮಾನ್ಯ ಸದಸ್ಯರು ಅಪೇಕ್ಷೆ ಪಟ್ಟಿದ್ದಾರೆ. ನಾನು ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ಕೊಟ್ಟು ಆದಷ್ಟು ಬೇಗ ಮಾಡತಕ್ಕ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್:- ಅಲ್ಲಿಯವರೆಗೆ ವಾರದಲ್ಲಿ ಎರಡು ದಿನ ಹುಬ್ಬಳ್ಳಿಗೆ ಬಂದು ಎಂ.ಡಿ. ಅವರು ಮತ್ತು ಫಂಕ್ಷನಲ್ ಹೆಡ್ಸ್ ಕೆಲಸ ಮಾಡಲಿ, ಉಳಿದ ನಾಲ್ಕು ದಿನ ಬೆಂಗಳೂರಿನಲ್ಲಿ ಮಾಡಲಿ.

ಅಧ್ಯಕ್ಷರು:- ತಮ್ಮ ಸಲಹೆ ಒಳ್ಳೆಯದು ಇದೆ. ಅದನ್ನು ಜಾರಿಗೆ ತರುತ್ತಾರೆ.

ವಿಷಯ:- ವಿಜಾಪುರ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆ ಜಾರಿ.

27(1)

ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ):- ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ವಿಜಾಪುರ, ಗುಲ್ಬರ್ಗಾ ಮತ್ತು ಬೀದರ್ ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತರು ಜಾಸ್ತಿ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅಲ್ಪಸಂಖ್ಯಾತರಿಗಾಗಿ ಜಾರಿಗೊಳಿಸಲಾದ ಗಂಗಾ ಕಲ್ಯಾಣ ಯೋಜನೆಯಡಿ ವಿಜಾಪುರ ಜಿಲ್ಲೆಯನ್ನು ಸೇರಿಸದೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದಲ್ಲಿ ಗಂಗಾ ಕಲ್ಯಾಣ ಯೋಜನೆಗೆ ಸೇರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):-

ಅ) ಬಂದಿದೆ.

ಆ) ಬಂದಿದೆ.

ಇ) ಸರ್ಕಾರದ ಹಂತದಲ್ಲಿ ಪರಿಶೀಲಿಸಲಾಗುತ್ತಿದೆ.

ಶ್ರೀ ಗೋವಿಂದ ಎಂ. ಕಾರಜೋಳ:- ನನ್ನ (ಆ) ಪ್ರಶ್ನೆಗೆ ಉತ್ತರವಾಗಿ ಸರ್ಕಾರದ ಗಮನಕ್ಕೆ ಬಂದಿದೆಯೆಂದು ಹೇಳಿದ್ದಾರೆ. ಹೆಚ್ಚಿನ ಪ್ರಮಾಣದಲ್ಲಿ ಅಲ್ಪಸಂಖ್ಯಾತರು ಇರುವುದು ಬಿಜಾಪುರ ಜಿಲ್ಲೆಯಲ್ಲಿ ಈ ಬಗ್ಗೆ ಎಷ್ಟು ದಿನಗಳಲ್ಲಿ ತಾವು ಆದೇಶ ಹೊರಡಿಸುತ್ತಿರೆಂದು ನಿರ್ದಿಷ್ಟವಾಗಿ ಹೇಳಲಿಲ್ಲ. ಅದನ್ನು ತಾವು ದಯಮಾಡಿ ಹೇಳಬೇಕು.

ಶ್ರೀ ಮಾಲೀಕಯ್ಯ ವಿ.ಗುತ್ತೇದಾರ್:- ಅಲ್ಪಸಂಖ್ಯಾತರ ಜಿಲ್ಲೆಗಳೆಂದು ಈಗಾಗಲೇ ಮೂರು ಜಿಲ್ಲೆಗಳನ್ನು ಆಯ್ಕೆ ಮಾಡಿದ್ದೇವೆ. ಅವು ಯಾವುವೆಂದರೆ ಬೀದರ್, ಗುಲ್ಬರ್ಗ, ಮತ್ತು ರಾಯಚೂರು ಜಿಲ್ಲೆಗಳು. ಆದರೆ ಬಿಜಾಪುರ, ಮಂಗಳೂರು, ಬೆಳಗಾಂ, ದಕ್ಷಿಣ ಕನ್ನಡ, ಕೋಲಾರ ಹೀಗೆ ಹಲವಾರು ಜಿಲ್ಲೆಗಳಲ್ಲಿ ಅಲ್ಪಸಂಖ್ಯಾತರು ಇರುವುದರಿಂದ ಇಡೀ ರಾಜ್ಯಕ್ಕೆ ಈ ಕಾರ್ಯಕ್ರಮವನ್ನು ಅಳವಡಿಸತಕ್ಕ ವಿಚಾರ ನಮ್ಮದಾಗಿದೆ. ಆದರೆ ಈಗಾಗಲೇ ನಾವು ಏನು ಮೂರು ಕೋಟಿ ಹತ್ತೊಂಬತ್ತು ಲಕ್ಷ ರೂಪಾಯಿ ತೆಗೆದು ಇಟ್ಟಿದ್ದೇವೆ ಗಂಗಾ ಕಲ್ಯಾಣ ಯೋಜನೆಗಾಗಿ ಅದು ಭಾರತದ ಇತಿಹಾಸದಲ್ಲಿ ನಮ್ಮ ಕರ್ನಾಟಕ ಸರ್ಕಾರ ಪ್ರಥಮ ಬಾರಿಗೆ ಈ ಒಂದು ಯೋಜನೆ ಅಡಿಯಲ್ಲಿ ಈ ಪ್ರದೇಶಕ್ಕೆ ಕೊಟ್ಟಿರುವ ಹಣ ಎಂದು ಹೆಮ್ಮೆಯಿಂದ ಹೇಳುತ್ತೇನೆ. ಈ ಯೋಜನೆ ಯಾವ ರಾಜ್ಯದಲ್ಲಿಯೂ ಕೂಡ ಇರಲಿಲ್ಲ.

ಅಧ್ಯಕ್ಷರು:- ಅಲ್ಪಸಂಖ್ಯಾತರಿಗೆ ಮೂರು ಜಿಲ್ಲೆ ಇದೆಯಲ್ಲ ಅದರ ಜೊತೆಗೆ ಇನ್ನೂ ಮೂರು ಜಿಲ್ಲೆಗಳನ್ನು ಅಂದರೆ ಕೋಲಾರ ಬಿಜಾಪುರ, ಮಂಗಳೂರು ಇವುಗಳನ್ನು ಸೇರಿಸಿಕೊಂಡು ಮಾಡಿ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:- ಸ್ವಲ್ಪ ಗೊಂದಲ ವಾತಾವರಣ ಉಂಟಾಗುತ್ತಿದೆ. ಇಂಡಿವಿಜ್ಯುಯಲ್ ಆಗಿ ಕೊಡಿ ಎಂದು ಬಹಳ ಜನರ ಬೇಡಿಕೆ ಇರುವುದರಿಂದ ಅದಕ್ಕೆ ಇಂಡಿವಿಜ್ಯುಯಲ್ ಆಗಿ ಕೊಟ್ಟು ಮಾಡಿದರೆ ಒಳ್ಳೆಯದೋ ಅಥವಾ ಸಾಮೂಹಿಕವಾಗಿ ಕೊಟ್ಟರೆ ಒಳ್ಳೆಯದೋ ಎಂದು ವಿಚಾರ ಮಾಡುತ್ತಿದ್ದೇವೆ. ಆದಷ್ಟು ಮಾನ್ಯ ಸದಸ್ಯರ ಸಲಹೆಯಂತೆ ಬಿಜಾಪುರ ಜಿಲ್ಲೆಯಲ್ಲಿ ಕಾರ್ಯರೂಪಕ್ಕೆ ತರುವ ಕಾರ್ಯಕ್ರಮ ರೂಪಿಸುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ.

ಶ್ರೀ ಜುಲ್ಫಿಕರ್ ಹಸ್ಮಿ:- ಮಾನ್ಯ ಸಚಿವರು ಗಂಗಾ ಕಲ್ಯಾಣ ಯೋಜನೆಯನ್ನು ಅಲ್ಪಸಂಖ್ಯಾತರ ಸಲುವಾಗಿ ತಂದಿದ್ದಾರೆ. ಅದಕ್ಕೆ ನಾನು ಅವರಿಗೆ ಧನ್ಯವಾದ ಹೇಳುತ್ತೇನೆ. ತಾವು ಕೋಲಾರ, ಬಿಜಾಪುರ, ಮಂಗಳೂರನ್ನು ಸೇರಿಸಿ ಎಂದು ಹೇಳುತ್ತೀರಿ ಈಗ ಸರ್ಕಾರದಲ್ಲಿ ಏನು ಹಣ ಇದೆ ಅದು ಮೂರು ಜಿಲ್ಲೆಗೆ ಸಾಕಾಗುವುದಿಲ್ಲ. ಅದರ ಸಲುವಾಗಿ ಸರ್ಕಾರದಲ್ಲಿ ವಿನಂತಿ ಏನೆಂದರೆ ಮಾನ್ಯ ಸಚಿವರು ಈ ಇಲಾಖೆಗೆ ಹೆಚ್ಚಿಗೆ ಹಣ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಗಂಗಾ ಕಲ್ಯಾಣ ಯೋಜನೆಯ ಗೈಡ್ ಲೈನ್ಸ್ ಇನ್ನೂ ಬಂದಿಲ್ಲ. ಬೇಗ ಆ ಗೈಡ್ ಲೈನ್ಸ್ ಕೊಡಿಸಿಕೊಡಬೇಕು.

ಅಧ್ಯಕ್ಷರು:- ಆ ಬಗ್ಗೆ ಮಾನ್ಯ ಉಪ ಮುಖ್ಯ ಮಂತ್ರಿಗಳನ್ನು ಕೇಳಿಕೊಳ್ಳಿ.

ಶ್ರೀ ಸಿ.ಆರ್. ಸಗೀರ್ ಅಹ್ಮದ್:- ಮಾನ್ಯ ಮಂತ್ರಿಗಳು ಹಮ್ಮಿಕೊಂಡಿರುವ ಕಾರ್ಯಕ್ರಮದ ಬಗ್ಗೆ ನನಗೆ ಸಂತೋಷ ಇಲ್ಲ ಕಾರಣವೇನೆಂದರೆ ಈಗ ನಾವು 339 ಲಕ್ಷ ರೂಪಾಯಿಗಳನ್ನು ಇದಕ್ಕಾಗಿ

ಮೀಸಲಿಟ್ಟಿದ್ದೇವೆ ಎಂದು ಹೇಳಿದರು. ಈ ಕಾರ್ಯಕ್ರಮ ಮಾಡಿದ್ದು ಹಿಂದಿನ ಸಾಲಿನಲ್ಲಿ ಆದರೆ ಎಷ್ಟು ಪ್ರಗತಿಪರವಾಗಿ ಕೆಲಸ ನಡೆದಿದೆಯೆಂದು ಮಾಹಿತಿ ಇಲ್ಲ. ಇಲ್ಲಿಯವರೆಗೆ ಹಣ ಖರ್ಚಾಗಿಲ್ಲಿ ಈ ಕಾರ್ಯಕ್ರಮ ಯಶಸ್ವಿ ಆಗಬೇಕಾದ ಸಂದರ್ಭದಲ್ಲಿ ಇಡೀ ರಾಜ್ಯದಲ್ಲಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಆದ್ದರಿಂದ ಅದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಹಣ ಒದಗಿಸಿಕೊಡಬೇಕಾಗುತ್ತದೆ.

ಅಧ್ಯಕ್ಷರು:- ಹಂತ ಹಂತವಾಗಿ ಇಡೀ ರಾಜ್ಯದಲ್ಲಿ ಮಾಡುತ್ತಾರೆ.

ವಿಷಯ:- ಶಿಗ್ಗಾಂವ್ ಕ್ಷೇತ್ರಕ್ಕೆ ಕುಡಿಯುವ ನೀರಿನ ಯೋಜನೆ.

29(100)

ಶ್ರೀ ಮಂಜುನಾಥ ಸಿ. ಕನ್ನೂರ (ಶಿಗ್ಗಾಂವ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಶಿಗ್ಗಾಂವ್ ಸವಣೂರ, ಬಂಕಾಪುರ ಪಟ್ಟಣಗಳಿಗೆ ವರದಾ ನದಿಯಿಂದ ಕುಡಿಯುವ ನೀರು ಒದಗಿಸುವ ಯೋಜನೆ ಮಂಜೂರಾಗಿದ್ದು ಯಾವಾಗ;

ಆ) ಸದರಿ ಯೋಜನೆಯ ಕಾರ್ಯಸ್ಥಗಿತಗೊಳ್ಳಲು ಕಾರಣಗಳೇನು;

ಇ) ಸದರಿ ಯೋಜನೆಗೆ ಸಂಬಂಧಿಸಿದ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ; ಹಾಗೂ ಅದಕ್ಕೆ ತಗುಲಿದ ಖರ್ಚು ಎಷ್ಟು;

ಈ) ಸದರಿ ಯೋಜನೆಗೆ ಸಂಬಂಧಿಸಿದ ಜಲಸಂಗ್ರಹಾಗಾರ ಹಾಗೂ ಪೈಪ್‌ಲೈನ್ ಕೆಲಸಗಳನ್ನು ಎಷ್ಟು ದಿವಸಗಳಲ್ಲಿ ಪೂರ್ಣಗೊಳಿಸಲಾಗುವುದು?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ದಿನಾಂಕ 9-10-91 ರಂದು ರೂ. 745.00 ಲಕ್ಷಗಳಿಗೆ ಸರ್ಕಾರದಿಂದ ಆಡಳಿತಾತ್ಮಕ ಮಂಜೂರಾತಿ ದೊರೆತಿದೆ.

ಆ) ಯೋಜನೆಯಲ್ಲಿ ಮಾರ್ಪಾಡುಗಳನ್ನು ಮಾಡಿ ಅಂದಾಜನ್ನು ಹಾಲಿ ದರಪಟ್ಟಿಗೆ ಪರಿಷ್ಕರಿಸಿ ಆಡಳಿತಾತ್ಮಕ ಮಂಜೂರಾತಿಯನ್ನು ಪಡೆಯಬೇಕಾಗಿರುವುದರಿಂದ ಕಾರ್ಯ ಸದ್ಯಕ್ಕೆ ಸ್ಥಗಿತಗೊಂಡಿದೆ.

ಇ) ಸದರಿ ಯೋಜನೆಗೆ ಸಂಬಂಧಿಸಿದ ನಾಗನೂರ ಕರೆಯ ಸಾಮರ್ಥ್ಯವನ್ನು ಹೆಚ್ಚಿಸುವ ಹಾಗೂ ಒಡ್ಡನ್ನು ಬಲಪಡಿಸುವ ಕೆಲಸ ಪೂರ್ಣಗೊಂಡಿದೆ. ಈ ಕಾಮಗಾರಿಗೆ ಖರ್ಚಾಗಿರುವ ಮೊತ್ತ 12:96 ರವರೆಗೆ ರೂ.621.07 ಲಕ್ಷಗಳು.

ಈ) ಈಗಾಗಲೇ ಪ್ರಸ್ತಾವನೆ ಮಾಡಿರುವಂತೆ ಶಿಗ್ಗಾಂವ್, ಸವಣೂರು ಮತ್ತು ಬಂಕಾಪುರ ಪಟ್ಟಣಗಳಿಗೆ ನೀರನ್ನು ಸರಬರಾಜು ಮಾಡಲು ಯೋಜನೆಯ ಅಂದಾಜು 2020 ಲಕ್ಷ ರೂ.ಗಳಾಗುವುದರಿಂದ ಈಗಾಗಲೆ ಮಂಜೂರಾಗಿರುವ 745 ಲಕ್ಷಗಳಿಗೆ ಸ್ಥಿಮಿತಗೊಳಿಸಿ,